1) **ಶ್ರೀ ಸದಾನಂದ ಕುಂಬಾರ** ರವರು ಬಿ.ಗುಡಿ ಕ್ಯಾಂಪನಲ್ಲಿ ಹೆಲಿಪ್ಯಾಡ ಪ್ರದೇಶದಲ್ಲಿ 11 ಕೆವಿ ಲೈನ್ ಶಿಫ್ಟ್ ಮಾಡುವ ಬಗ್ಗೆ ಮನವಿ ಸಲ್ಲಿಸಿದರು.

**ಉತ್ತರ**:- ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರು ಶಾಖಾಧಿಕಾರಿ ಶಹಾಪುರ ಪಟ್ಟಣ-2 ರವರಿಗೆ ಸ್ಥಳ ಪರಿಶೀಲನೆ ಮಾಡಿ ಅಂದಾಜು ಪಟ್ಟಿ ತಯಾರಿಸಿ ಉಪ-ವಿಭಾಗದಿಂದ ವಿಭಾಗೀಯ ಕಛೇರಿಗೆ ಸಲ್ಲಿಸಲು ಸೂಚಿಸಿದರು.

2) **ಶ್ರೀ ಸದಾನಂದ ಕುಂಬಾರ** ರವರು ಬಿ.ಗುಡಿ ಕ್ಯಾಂಪನಲ್ಲಿ ಸುಟ್ಟಿರುವ ಎನರ್ಜಿ ಮೀಟರ್‌ಗಳ ಬದಲಾವಣೆ ಮಾಡಲು ಕೋರಿದರು.

**ಉತ್ತರ**:- ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರು ಶ್ರೀ ರಮೇಶ ರಾಠೋಡರವರಿಗೆ ತಕ್ಷಣವೇ ಸುಟ್ಟಿರುವ ಎನರ್ಜಿ ಮೀಟರ್‌ಗಳನ್ನು ಸ್ಥಳ ಪರಿಶೀಲನೆ ಮಾಡಿ ಅಂದಾಜು ಪಟ್ಟಿ ತಯಾರಿಸಿ ಆದಷ್ಟು ಬೇಗನೆ ಮೀಟರ್ ಬದಲಾವಣೆ ಮಾಡಲು ಸೂಚಿಸಿದರು.

3) **ಶ್ರೀ ರಾಜಕುಮಾರ** ಶಹಾಪುರ ರವರು ಬಿಲ್ಲು ಜಾಸ್ತಿ ಬರುತ್ತಿರುವ ಬಗ್ಗೆ ಕಾರ್ಯನಿರ್ವಾಹಕ ಅಭಿಯಂತರರಿಗೆ ಮನವಿ ಸಲ್ಲಿಸಿದರು.

**ಉತ್ತರ**:- ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರು ಶಾಖಾಧಿಕಾರಿಯವರಿಗೆ ಗ್ರಾಹಕರ ಬಿಲ್ಲು ಪರಿಶೀಲನೆ ಮಾಡಿ ಮತ್ತು ಮೀಟರ್ ತಪಾಸಣೆ ಮಾಡಿಸಲು ಸೂಚಿಸಿದರು.

4) **ಶ್ರೀ ರಂಗಪ್ಪ ಶಹಾಪುರ** ಇವರು ಬಿಲ್ಲು ಕಟ್ಟಲು ಬಂದಾಗ ಸಿಬ್ಬಂದಿಯವರು ಸರಿಯಾಗಿ ಸಲಹೆ ನೀಡಿರುವುದಿಲ್ಲಾ ಎಂದು ತಮ್ಮ ದೂರನ್ನು ಸಲ್ಲಿಸಿದರು.

**ಉತ್ತರ**:- ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರು ಶ್ರೀ ನಾನಾಗೌಡ ರವರಿಗೆ ಸಂಬಂಧಪಟ್ಟ ಸಿಬ್ಬಂದಿಯವರಿಗೆ ಸರಿಯಾಗಿ ಸ್ಪಂದನೆ ನೀಡಲು ಸೂಚಿಸಿದರು.

5) **ಶ್ರೀ ಬಸಣ್ಣ ಮಹಾಂತಗೌಡ ಶಹಾಪುರ** ಇವರು ವಿದ್ಯುತ್ ಬಿಲ್ಲು ಪ್ರತಿ ತಿಂಗಳು ರೂ.3500/- ಬಂದಿರುತ್ತದೆ. ಆದಕ್ಕಾಗಿ ಎಂ.ಟಿ. ಟೆಸ್ಟ್ ಮಾಡಿಸಲು ಅರ್ಜಿ ಹಾಕಿದರೂ ಸಮಸ್ಯೆ ಇನ್ನೂ ಬಗೆಹರಿಸಿಲ್ಲಾ ಎಂದು ಮನವಿ ಸಲ್ಲಿಸಿದರು.

**ಉತ್ತರ**:- ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಕ್ಷಣವೇ ಸಮಸ್ಯೆ ಪರಿಹರಿಸುವದಾಗಿ ಹೇಳಿದರು.

6) **ಶ್ರೀ ರಮೇಶ ಟಿ.ವಡಗೇರಾ** ರವರು ಪಿಂಜರ್‌ದೊಡ್ಡಿಯಲ್ಲಿ 45 ಮನೆಗಳಿದ್ದು ಆ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕಾರ್ಯನಿರ್ವಾಹಕರಿಗೆ ಮನವಿ ಸಲ್ಲಿಸಿದರು.

**ಉತ್ತರ**:- ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರು ಶ್ರೀ ರಾಮ್‌ದಾಸ್ ರವರಿಗೆ ಸ್ಥಳ ಪರಿಶೀಲನೆ ಮಾಡಿ ಬೆಳಕು ಯೋಜನೆ ಅಡಿಯಲ್ಲಿ 45 ಮನೆಗಳಿಗೆ ವಿದ್ಯುತ್ ಸಂಪರ್ಕ ಕೊಡಲು ಸೂಚಿಸಿದರು.



Scanned with CamScanner